KATK010046722022

## 1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು

## ವಿಶೇಷ ಮೊಕದ್ದಮೆ ಸಂಖ್ಯೆ. 463 /2022

P.W: 2
C.W: 2

**ದಿನಾಂಕ 04.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**ಹೆಸರು** : ಕರಿಬಸವಯ್ಯ

**ತಂದೆಯ ಹೆಸರು :** ಬಸವರಾಜು

**ವಯಸ್ಸು** : 66 ವರ್ಷ

**ವೃತ್ತಿ** : ಕೂಲಿ ಕೆಲಸ

**ವಾಸಸ್ಥಳ** : ಶಿರಾ .

**<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>**

1. ಚಾ.ಸಾ.3 ಗೊತ್ತಿಲ್ಲ. 1 ಮತ್ತು 2 ನೇ ಅರೋಪಿಗಳು ಗೊತ್ತಿಲ್ಲ. ಸಾಕ್ಷಿ ನಿ.ಪಿ.2 ರಲ್ಲಿ ಸಾಕ್ಷಿ ತಮ್ಮ ಸಹಿ ನೋಡಿ ಗುರುತಿಸಿದ್ದು ಸದರಿ ಸಹಿಯನ್ನು ನಿ.ಪಿ.2(ಬಿ) ಎಂದು ಗುರುತು ಮಾಡಲಾಯಿತು. ನಿ.ಪಿ.3 ರಲ್ಲಿ ಸಾಕ್ಷಿ ತಮ್ಮ ಸಹಿ ನೋಡಿ ಗುರುತಿಸಿದ್ದು ಸದರಿ ಸಹಿಯನ್ನು ನಿ.ಪಿ.3(ಬಿ) ಎಂದು ಗುರುತು ಮಾಡಲಾಯಿತು. 2-3 ವರ್ಷದ ಹಿಂದೆ ನಾನು ಸಿದ್ದಗಂಗಾ

ಮಠಕ್ಕೆ ಹೋಗಿ ಬರುವಾಗ ಪೋಲೀಸ್ ಠಾಣೆಯಲ್ಲಿ ಪೋಲೀಸರು ನನ್ನ ಸಹಿಗಳನ್ನು 2 ದಾಖಲಾತಿಗಳಿಗೆ ಪಡೆದರು. ಯಾವ ಕಾರಣಕ್ಕೆ ನನ್ನ ಸಹಿ ಪಡೆದಿರುತ್ತಾರೆ ನನಗೆ ಗೊತ್ತಿಲ್ಲ. ನನಗೆ ಪೋಲೀಸರು ಅದನ್ನು ಓದಿ ಹೇಳಿರಲಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಲೀಸರು ನನ್ನ ಹೇಳಿಕೆ ಪಡೆದಿಲ್ಲ.

*(ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಗಳ ಮುಂದೆ ನೀಡಿದ ಹೇಳಿಕೆಗೆ ವಿರುದ್ದವಾಗಿ ಸಾಕ್ಷಿ ನುಡಿದಿರುವುದರಿಂದ ಪ್ರತಿಕೂಲ ಪಕ್ಷಗಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಲಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಸರ್ಕಾರಿ ಅಬಿಯೋಜಕರು ಬಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋದಾತ್ಮಕವಾಗಿ ಸಾಕ್ಷಿ ನುಡಿದಿರುವುದು ಕಂಡುಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಗಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಬಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಜಿತ ಎಂದು ಮನಗಂಡು ಅನುಮತಿ ನೀಡಲಾಯಿತು)*

**<u>ಪಾಟೀಸವಾಲು ಸರ್ಕಾರಿ ಅಭಿಯೋಜಕರಿಂದ</u>**

2. 2 ನೇ ಆರೋಪಿಯ ಕಟ್ಟಡವನ್ನು 1 ನೇ ಆರೋಪಿ ಬಾಡಿಗೆಗೆ ಪಡೆದು ಪಿಜಿ ನಡೆಸುತ್ತಿದ್ದರು ಎಂದರೆ ಗೊತ್ತಿಲ್ಲ. ನಾನು 1 ನೇ ಅರೋಪಿಯ ಸಿದ್ದಗಂಗಾ ಪಿಜಿ ಯಲ್ಲಿ ಅಡುಗೆ ಕೆಲಸ ಮಾಡುತ್ತಿದ್ದೆ ಎಂದರೆ

ಸರಿಯಲ್ಲ. ಬೆಸ್ಕಾಂ ಪೋಲೀಸರು 1 ನೇ ಆರೋಪಿ ಪಿಜಿ ನಡೆಸುತ್ತಿದ್ದ ಕಟ್ಟಡಕ್ಕೆ ದಿ.24.09.2019 ರಂದು ಅನಧಿಕೃತವಾಗಿ ಜಕಾತಿ- 2 ರಅನ್ವಯ ವಿದ್ಯುತ್ ಸಂಪರ್ಕ ಪಡೆದು ಎಲ್.ಟಿ.3 ಜಕಾತಿ ಉದ್ದೇಶಕ್ಕಾಗಿ ಬಳಕೆ ಮಾಡುತ್ತಿದ್ದ ಬಗ್ಗೆ ದಾಳಿ ನಡೆಸಿದ್ದರು ಎಂದರೆ ಸರಿಯಲ್ಲ. ಬೆಸ್ಕಾಂ ಪೋಲೀಸರು ಸ್ಥಳ ಪರಿಶೀಲನೆಯ ವೇಳೆ ವಸತಿ ಉದ್ದೇಶಕ್ಕಾಗಿ ಪಡೆದ ವಿದ್ಯುತ್ ಸಂಪರ್ಕವನ್ನು 1 ನೇ ಆರೋಪಿ ವಾಣಿಜ್ಯ ಉದ್ದೇಶಕ್ಕೆ ಬಳಕೆ ಮಾಡುತ್ತಿದ್ದ ಬಗ್ಗೆ ಮಹಜರ್ ಮಾಡಿ ನನ್ನ ಸಹಿ ಪಡೆದಿದ್ದರು ಎಂದರೆ ಸರಿಯಲ್ಲ. ಪಿ.ಜಿ. ಯಲ್ಲಿ ಹೆಣ್ಣು ಮಕ್ಕಳ ವಸತಿ ಉದ್ದೇಶಕ್ಕಾಗಿ ನಡೆಸುತ್ತಿದ್ದ ಕಾರಣ ಆ ದಿನ ಬೆಸ್ಕಾಂ ಪೋಲೀಸರ ವಿದ್ಯುತ್ ಸಂಪರ್ಕ ಕಡಿತ ಗೊಳಿಸಿರಲಿಲ್ಲ ಎಂದರೆ ಸರಿಯಲ್ಲ. ಪೋಲೀಸರು ಸ್ಥಳದಲ್ಲಿ ಸ್ಥಳ ಪರಿಶೀಲನೆ ಮಾಡಿ ಇನ್ಸ ಪೆಕ್ಷನ್ ರಿಪೋರ್ಟ್ ಪಿಜಿ ಯಲ್ಲಿ ತಯಾರು ಮಾಡಿದ್ದು ಪಿಜಿಯಲ್ಲಿ ನಾನು ನಿ.ಪಿ.2 ಮತ್ತು 3 ಕ್ಕೆ ಸಹಿ ಮಾಡಿದ್ದೆ ಎಂದರೆ ಸರಿಯಲ್ಲ. ನಾನು ಪಿಜಿಯಲ್ಲಿ ಅಡುಗೆ ಕೆಲಸ ಮಾಡುತ್ತಿದ್ದ ಕಾರಣ ಆ ದಿನ ನಾನು ಪೋಲೀಸರ ಮುಂದೆ ಈಗ ಓದಿ ಹೇಳಿದ ನಿ.ಪಿ.5 ರಂತೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ನಾನು 1 ನೇ ಆರೋಪಿ ಬಳಿ ಅಡುಗೆ ಕೆಲಸ ಮಾಡುತ್ತಿದ್ದ ಕಾರಣ ಅವರು ನನಗೆ ಪರಿಚಯಸ್ಥರಾಗಿದ್ದರಿಂದ ಆಕೆಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು 1 ಮತ್ತು 2 ನೇ ಆರೋಪಿ ಪರ ಹೆಚ್.ವಿ.ಆರ್. ಮತ್ತು ಎನ್ .ಸಿ. ಜಿ. ವಕೀಲರಿಂದ**

1 ಮತ್ತು 2 ನೇ ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.

**1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು**

**ವಿಶೇಷ ಮೊಕದ್ದಮೆ ಸಂಖ್ಯೆ. 463 /2022**

P.W:1
C.W:1

**ದಿನಾಂಕ 21.12.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲು 2 ನೇ ಆರೋಪಿ ಪರ ಶ್ರೀ.ಹೆಚ್.ವಿ.ಆರ್. ವಕೀಲರಿಂದ**

6. ನಾನು ಬೆಸ್ಕಾಂ ಜಾಗೃತ ದಳದಲ್ಲಿ ನಾನು ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದೇನೆ. ಕಟ್ಟಡಗಳಿಗೆ ವಿದ್ಯುಚ್ಛಕ್ತಿ ಸೌಲಭ್ಯ ಪಡೆಯಲು ಅನುಸರಿಸುವ ಕ್ರಮಗಳ ಬಗ್ಗೆ ನನಗೆ ಗೊತ್ತು. ನಮ್ಮ ಕಚೇರಿಯಿಂದ ನಿಗಧಿಪಡಿಸಿದ ಅರ್ಜಿ ಮತ್ತು ನಮೂನೆಯನ್ನು ಭರ್ತಿ ಮಾಡಿ ವಿದ್ಯುಚ್ಛಕ್ತಿ ಪಡೆಯವ ಗ್ರಾಹಕರು ಸಲ್ಲಿಸುತ್ತಾರೆ. ಸದರಿ ಗ್ರಾಹಕರಿಂದಲೇ ಇಂಡಿಮಿನಿಟಿ ಬಾಂಡನ್ನು ಪಡೆಯುತ್ತೇವೆ. ನಗರ ಪ್ರದೇಶದಲ್ಲಿ ಕಟ್ಟಡದ ಅನುಮೋದಿತ ನಕ್ಷೆಯನ್ನು ವಿದ್ಯುಚ್ಛಕ್ತಿ ಸೌಲಭ್ಯ ಪಡೆಯುವ ವೇಳೆ ಪಡೆಯಬೇಕು. ನಕ್ಷೆ ನಮೂದು ಮಾಡಿದ ನಂತರ ನಮ್ಮ ಬೆಸ್ಕಾಂ ಇಲಾಖೆ ಕಚೇರಿ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ನಂತರ ಜಕಾತಿ 2 (ಗೃಹೋಪಯೋಗಿ) ಅಥವಾ ಜಕಾತಿ

3(ವಾಣಿಜ್ಯ ಉದ್ದೇಶ) ರನ್ವಯ ವಿದ್ಯುತ್ ಸೌಲಭ್ಯ ನೀಡಬೇಕೋ ಇಲ್ಲವೋ ಎಂದು ತೀರ್ಮಾನ ಮಾಡುತ್ತೇವೆ. ಅರ್ಜಿಯಲ್ಲಿ ಯಾವ ಉದ್ದೇಶಕ್ಕಾಗಿ ವಿದ್ಯುತ್ ಸೌಲಭ್ಯ ಪಡೆಯಬೇಕು ಎಂದು ನಮೂದು ಮಾಡಿರುತ್ತಾರೆ ಅದರ ಆಧಾರದ ಮೇಲೆ ಮುಂಗಡ ಹಣವನ್ನು ಶಾಖಾ/ಉಪ ವಿಭಾಗ ಕಚೇರಿಯವರು ಪಡೆಯುತ್ತಾರೆ. ಸದರಿ ಉಪ ವಿಭಾಗಕ್ಕೆ ನಾನು ಮುಖ್ಯಸ್ಥನಲ್ಲ.

7. ಕಟ್ಟಡಕ್ಕೆ ಸಂಬಂಧಿಸಿದಂತೆ ವಿದ್ಯುಚ್ಛಕ್ತಿ ಸೌಲಭ್ಯವನ್ನು ಯಾವ ವರ್ಷದಲ್ಲಿ ಪಡೆದಿದ್ದರು ಎಂದು ನಾನು ದೂರು ಕೊಡುವ ವೇಳೆ ಮಾಹಿತಿ ಪಡೆದಿಲ್ಲ. ಯಾವ ಉದ್ದೇಶಕ್ಕಾಗಿ ಕಟ್ಟಡಕ್ಕೆ ಕಟ್ಟಡದ ಮಾಲೀಕರು ವಿದ್ಯುಚ್ಛಕ್ತಿ ಸೌಲಭ್ಯವನ್ನು ಪಡೆದುಕೊಂಡಿದ್ದರು ಎಂದು ಮಾಹಿತಿ ಪಡೆದಿಲ್ಲ. ಬೆಸ್ಕಾಂ ಪೋಲೀಸರು ನೀಡಿದ ಮಾಹಿತಿಯ ಅದಾರದಲ್ಲಿ ನಾನು ಮಾಹಿತಿ ಪಡೆದಿದ್ದೇನೆ. ಮಾಹಿತಿಯನ್ನು ನನಗೆ ಬೆಸ್ಕಾಂ ಪೋಲೀಸರು ಮೌಖಿಕವಾಗಿ ಹೇಳಿದ್ದರು. ದೂರು ಕೊಡುವ ಮೊದಲು ನಾನು ಯಾವ ಉದ್ದೇಶಕ್ಕಾಗಿ ಕಟ್ಟಡದ ಮಾಲೀಕರು ವಿದ್ಯುಚ್ಛಕ್ತಿ ಸೌಲಭ್ಯ ವನ್ನು ಪಡೆದಿರುತ್ತಾರೆ ಎಂದು ಬೆಸ್ಕಾ ಇಲಾಖೆಯ ದಾಖಲಾತಿಯನ್ನು ಪರಿಶೀಲಿಸಿಲ್ಲ.

8. ನಿ.ಪಿ.1 ದೂರನ್ನು ಪೋಲೀಸರು ತಯಾರು ಮಾಡಿದರು. ನಿ.ಪಿ.2 ನ್ನು ಪೋಲೀಸ್ ಠಾಣೆಯಲ್ಲಿ ಎಲ್.ಟಿ.2 ಯಿಂದ ಎಲ್.ಟಿ.3 ಗೆ

ಸಂಬಂಧಿಸಿದಂತೆ ಯಾವ ಅಂಶಗಳನ್ನು ನಮೂದು ಮಾಡಿ ತಯಾರು ಮಾಡಬೇಕು ಎಂದು ಚರ್ಚಿಸಿ ಠಾಣೆಯಲ್ಲಿ ಮಹಜರ್ ತಯಾರು ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿ.ಪಿ.2 ನ್ನು ಪೋಲೀಸ್ ಸಿಬ್ಬಂದಿ ಉಮೇಶ್ ರವರು ಬರವಣಿಗೆ ಮಾಡಿದರು. ನಿ.ಪಿ.2 ನ್ನು ನಾನು ಪೂರ್ಣ ವಾಗಿ ಓದಿ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಸದರಿ ಕಟ್ಟಡವನ್ನು ವಾಣಿಜ್ಯ ಉದ್ದೇಶಕ್ಕಾಗಿ ಬಳಕೆ ಮಾಡುತ್ತಿರಲಿಲ್ಲ ವಾಸದ ಉದ್ದೇಶಕ್ಕಾಗಿ ಬಳಕೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಗೃಹೋಪಯೋಗಿ ಬಳಕೆಗೆ ವಿದ್ಯುಚ್ಛಕ್ತಿಯನ್ನು ಬಳಕೆ ಮಾಡಿದ ಬಗ್ಗೆ ಕಟ್ಟಡದಲ್ಲಿ ವಾಸ ಮಾಡುತ್ತಿದ್ದವರು ಮಹಜರ್ ವೇಳೆ ದಾಖಲಾತಿ ಕೊಟ್ಟಿದ್ದರು. ಕಟ್ಟಡದ ವಿಸ್ತೀರ್ಣದ ಬಗ್ಗೆ ನನಗೆ ಮಾಹಿತಿ ಇಲ್ಲ. ಮಹಜರ್ ನಲ್ಲಿ ಕಟ್ಟಡದಲ್ಲಿ 18 ರೂಂಗಳು ಇರುತ್ತದೆ ಎಂದು ಎಲ್.ಟಿ.3 ಜಕಾತಿಗೆ ಅನುಕೂಲವಾಗುವಂತೆ ಸುಳ್ಳು ನಮೂದು ಮಾಡಿರುತ್ತೇವೆ ಎಂದರೆ ಸರಿಯಲ್ಲ. ವಿದ್ಯುಚ್ಛಕ್ತಿ ಸೌಲಭ್ಯ ಪಡೆಯುವ ವೇಳೆ ಗ್ರಾಹಕರು ಸಲ್ಲಿಸಿದ ದಾಖಲಾತಿಗಳನ್ನು ಪರಿಶೀಲಿಸಿದ್ದರೇ ಆ ಬಗ್ಗೆ ನಾನು ಮಹಜರ್ ನಲ್ಲಿ ಸ್ಪಷ್ಟತೆಯಿಂದ ನಮೂದು ಮಾಡುತ್ತಿದ್ದೆ ಎಂದರೆ ಸರಿ. ಬೆಸ್ಕಾಂ ಪೋಲೀಸರು ತಯಾರು ಮಾಡಿದ ನಿ.ಪಿ.2 ಮಹಜರಿಗೆ ನಾನು ಊಹೆಯ ಆದಾರದಲ್ಲಿ ಸಹಿ ಮಾಡಿದ್ದೇ ಎಂದರೆ ಸರಿಯಲ್ಲ. ಕಟ್ಟಡವನ್ನು ಗೃಹೋ ಪಯೋಗಿ ಬಳಕೆ ಮಾಡುತ್ತಿದ್ದರೂ ಸಹಾ ವಾಣಿಜ್ಯ ಉದ್ದೇಶಕ್ಕಾಗಿ ಬಳಕೆ

ಮಾಡುತ್ತಿದ್ದರು ಎಂದು ಮಹಜರ್ ನಲ್ಲಿ ಉದ್ದೇಶಪೂರ್ವಕವಾಗಿ ಸುಳ್ಳು ನಮಾದು ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿ.ಪಿ.3 ನ್ನು ಸ್ಥಳದಲ್ಲಿಯೇ ತಯಾರು ಮಾಡಿದ್ದೇವೆ. ನಿ.ಪಿ.3 ರ ಪ್ರತಿಯನ್ನು ಆರೋಪಿಗಳಿಗೆ ಕೊಟ್ಟಿರಲಿಲ್ಲ. ನಿ.ಪಿ.4 ನ್ನು ಜಕಾತಿ.3 ಕ್ಕೆ ಎಷ್ಟು ಹಣ ನಿಗಧಿಪಡಿಸಿರುತ್ತೇವೆ ಎಂದು Tariff ನಮೂದು ಅಗಿದ್ದು ಅದರ ಅಧಾರದಲ್ಲಿ ನಮೂದು ಮಾಡಿರುತ್ತೇವೆ. Tariff ನ್ನು ನಮ್ಮ ಇಲಾಖೆಯವರು ಸರ್ಕಾರಿ ಆದೇಶದ ಅನ್ವಯ ಬದಲಾವಣೆ ಮಾಡುತ್ತೇವೆ. ಚಾಲ್ತಿಯಲ್ಲಿರುವ Tariff ಗೆ ಸರ್ಕಾರಿ ಆದೇಶದ ಸಂಖ್ಯೆ ಮತ್ತು ದಿನಾಂಕವನ್ನು ನಮೂದು ಮಾಡಿರುತ್ತೇವೆ. ನಿ.ಪಿ.4 ನ್ನು 2019 ರ Tariff ನ ಅನ್ವಯ ತಯಾರು ಮಾಡಿದ್ದೇನೆ. ಸದರಿ Tariff ಈಗ ನಮ್ಮ ಕಚೇರಿಯಲ್ಲಿ ಲಭ್ಯವಿರುತ್ತದೆ. ತನಿಖಾಧಿಕಾರಿರವರು ನನ್ನನ್ನು 2019 ರ ಸಾಲಿನ Tariff ನ್ನು ತನಿಖೆಯ ವೇಳೆ ಕೊಡುವಂತೆ ಕೇಳಿರಲಿಲ್ಲ ನಾನು ಕೊಟ್ಟಿರಲಿಲ್ಲ. ನಾನು 2019 ರ Tariff ನ ಆಧಾರದಲ್ಲಿ ನಿ.ಪಿ.4 ನ್ನು ತಯಾರು ಮಾಡಿರುವ ಬಗ್ಗೆ ಸದರಿ ದಾಖಲಾತಿಯನ್ನು ನಮೂದು ಮಾಡಿಲ್ಲ. ಕಟ್ಟಡದ ಅಡಿಗೆ ಭಟ್ಟರಾದ ಕರಿಬಸವಯ್ಯರವರನ್ನು ನಾನು ಸ್ಥಳ ಪರಿಶೀಲನೆಯ ವೇಳೆ ವಿಚಾರಿಸಲಿಲ್ಲ ಮತ್ತು ಆತ 1 ನೇ ಆರೋಪಿ ಪಿಜಿ ನಡೆಸುತ್ತಿದ್ದಾರೆ ಎಂದು ಮಾಹಿತಿ ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ಕಟ್ಟಡದ ಸುತ್ತಮುತ್ತಲಿನವರನ್ನು ನಾವು ವಿಚಾರಿಸಿರಲಿಲ್ಲ ಮತ್ತು ಅವರು ಪಿಜಿ ನಡೆಸುತ್ತಿದ್ದಾರೆ ಎಂದು

ಮಾಹಿತಿ ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ಕಟ್ಟಡವನ್ನು ಪರಿಶೀಲಿಸಿದಾಗ ವಾಣಿಜ್ಯ ಉದ್ದೇಶಕ್ಕೆ ಕಟ್ಟಡ ಬಳಕೆ ಮಾಡುತ್ತಿದ್ದಾರೆ ಎಂದು ಊಹೆಯ ಆದಾರದ ಮೇಲೆ ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ಕಟ್ಟಡವನ್ನು ವಾಣಿಜ್ಯ ಉದ್ದೇಶಕ್ಕೆ ಬಳಕೆ ಮಾಡದೇ ಇದ್ದರೂ ಆರೋಪಿಗಳಿಂದ ದುರ್ಲಾಭ ಪಡೆಯಲು ವಾಣಿಜ್ಯ ಉದ್ದೇಶಕ್ಕೆ ಬಳಕೆ ಮಾಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.1 ರಿಂದ 4 ವಾಸ್ತವಾಂಶಕ್ಕೆ ದೂರವಾಗಿದ್ದು ಸುಳ್ಳು ಅಂಶಗಳಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ. ಎಸ್.ಜಿ. ವಕೀಲರಿಂದ**

9. ನಿ.ಪಿ.1 ರಲ್ಲಿ ಸ್ಥಳ ತನಿಖೆಗೆ ಯಾರು ಯಾರು ಹೋಗಿದ್ದರು ಎಂದು ನಮೂದು ಮಾಡಿಲ್ಲ. ಕಟ್ಟಡವನ್ನು ಪಿಜಿ ಉದ್ದೇಶಕ್ಕಾಗಿ ಬಳಕೆ ಮಾಡುತ್ತಿರಲಿಲ್ಲ, ವಾಸದ ಉದ್ದೇಶ ಕ್ಕಾಗಿ ಬಳಕೆ ಮಾಡುತ್ತಿದ್ದರು ಎಂದರೆ ಸರಿಯಲ್ಲ.

2 ನೇ ಆರೋಪಿ ಪರ ವಕೀಲರ ಪಾಟೀ ಸವಾಲನ್ನು ತಮ್ಮ ಪಾಟೀ ಸವಾಲು ಎಂದು ಪರಿಗಣಿಸುವಂತೆ ಅನುಮತಿ ಕೋರಿರುತ್ತಾರೆ ಅನುಮತಿಸಲಾಯಿತು.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.